ವಸತಿ ಗೃಹಗಳಿಗೆ ಮೂಲ ಸೌಲಭ್ಯವನ್ನು ನೀಡುವ ಬಗ್ಗೆ

1139 (1961) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರ ಮತ್ತು ವಿಲ್ಸ್ಸನ್‌ಗಾರ್ಡನ್‌ನಲ್ಲಿರುವ ಸರ್ಕಾರಿ ವಸತಿ ಗೃಹಗಳು ಜೀವನ್ ಭೀಮಾನಗರದ ವಸತಿ ಗೃಹಗಳಿಗಿಂತ ವಿನ್ಯಾಸದಲ್ಲಿ ವ್ಯತ್ಯಾಸವಿದ್ದ, ಸೌಲಭ್ಯಗಳಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಯೆ?

ಆ) ಮೇಲ್ಕಂಡ ಸರ್ಕಾರಿ ವಸತಿ ಗೃಹಗಳಲ್ಲಿರುವ ನೌಕರರು ನೀಡುವ ಬಾಡಿಗೆ ದರವು ಒಂದೇ ಆಗಿದ್ದು, ಜೀವನ್ ಭೀಮಾ ನಗರದಲ್ಲಿ ಒದಗಿಸಿರುವ ಸೌಲಭ್ಯಗಳನ್ನು ಇತರೆ ಸರ್ಕಾರಿ ವಸತಿ ಗೃಹಗಳಿಗೆ ಒದಗಿಸದಿರಲು ಕಾರಣಗಳೇನು?

ಇ) ಈ ತಾರತಮ್ಯವನ್ನು ಹೋಗಲಾಡಿಸಲು ಅನೇಕ ಬಾರಿ ಮನವಿ ಸಲ್ಲಿಸಿದ್ದು ಹಾಗೂ ಸದನದಲ್ಲಿ ಪ್ರಶ್ನೆಗಳನ್ನು ಕೇಳಿದಾಗ್ಯೂ ಸಹ ಮೂಲ ಸೌಲಭ್ಯವನ್ನು ಒದಗಿಸದಿರುವ ಬಗ್ಗೆ ಸರ್ಕಾರದ ನಿಲುವೇನು?

ಈ) ಈ ದಿಸೆಯಲ್ಲಿ ಹಂತ ಹಂತವಾಗಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದು, ಈಗಲಾದರೂ ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಯಪಯೋಗಿ ಮಂತ್ರಿಗಳು) :

ಅ) ಬಂದಿದೆ.

ಆ) ವಸತಿ ಗೃಹಗಳ ಕಟ್ಟುವಿಕೆಯ ವಿನ್ಯಾಸ ಮಾದರೀ ಇವುಗಳಿಂದಾಗಿ. ಈ ವ್ಯತ್ಯಾಸಗಳು ಸಹಜವಾಗಿರುತ್ತೆ.

ಇ) ಮೂಲ ಸೌಲಭ್ಯಗಳನ್ನೊದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ಮೂಲ ಸೌಲಭ್ಯಗಳನ್ನೊದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಕೊಟ್ಟೂರು-ಹರಿಹರ ರೈಲು ರಸ್ತೆಯ ವಿಸ್ತಾರ

1140 (1457) ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಟ್ಟೂರಿನಿಂದ ಹರಿಹರಕ್ಕೆ ಹೋಗುವ ರಸ್ತೆಯನ್ನು ವಿಸ್ತಾರ ಮಾಡಲು ಸರ್ಕಾರ ಆಲೋಚಿಸಿದೆಯೇ;

ಆ) ಈ ರಸ್ತೆಯನ್ನು ವಿಸ್ತಾರ ಮಾಡುವ ವಿಷಯ ಬಹಳ ಕಾಲದ ಬೇಡಿಕೆಯಾಗಿರುವುದು ನಿಜವಲ್ಲವೆ;

ಇ) ಹಾಗಿದ್ದಲ್ಲಿ ಸದರಿ ವಿಷಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ;

ಈ) ಸಲ್ಲಿಸದಿದ್ದರೆ ಈಗಲಾದರೂ ಮನವಿಯನ್ನು ಸಲ್ಲಿಸಲಾಗುವುದೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ಹೌದು ರೈಲು ರಸ್ತೆಯನ್ನು ವಿಸ್ತಾರ ಮಾಡಲು ಸರ್ಕಾರ ಆಲೋಚಿಸಿದೆ.

ಆ) ಹೌದು.

ಇ) ಸಲ್ಲಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ತಯಾರಾದ ಕನ್ನಡ ಚಲನಚಿತ್ರಗಳ ಸಂಖ್ಯೆ

1141 (1948) ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರತಿ ವರ್ಷ ರಾಜ್ಯದಲ್ಲಿ ತಯಾರಾಗುವ ಕನ್ನಡ ಚಲನಚಿತ್ರಗಳ ಸಂಖ್ಯೆ ಎಷ್ಟು?
2. ರಾಜ್ಯದ ಹೊರಗಡೆ ತಯಾರಾದ ಚಿತ್ರಗಳ ಸಂಖ್ಯೆ ಎಷ್ಟು?
3. ಕನ್ನಡ ಚಿತ್ರಗಳನ್ನು ತಯಾರಿಸಿದ ಮತ್ತು ತಾಂತ್ರಿಕ ನೆರವು ನೀಡಿದ ಹೊರ ರಾಜ್ಯಗಳಾವುವು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

1. ಪ್ರತಿ ವರ್ಷ ಸರಾಸರಿ 75 ರಿಂದ 80 ಕನ್ನಡ ಚಲನಚಿತ್ರಗಳು ರಾಜ್ಯದಲ್ಲಿ ತಯ್ಯಾರಾಗುತ್ತಿವೆ.
2. ಕನ್ನಡ ಚಲನಚಿತ್ರಗಳಾವುವು. ರಾಜ್ಯದ ಹೊರಗಡೆ ತಯಾರಾಗುತ್ತಿಲ್ಲ.
3. ಹೊರ ರಾಜ್ಯಗಳಾವುವು. ಕನ್ನಡ ಚಿತ್ರಗಳನ್ನು ತಯಾರಿಸಿರುವುದಿಲ್ಲ ಮತ್ತು ತಾಂತ್ರಿಕ ನೆರವು ನೀಡಿರುವುದಿಲ್ಲ.

ಜಿಲ್ಲಾ ಪರಿಷತ್ತು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವುದು.

1142 (1951) ಶ್ರೀ ಮನೋಹರ್ ಐನಾಪುರ (ಬಳ್ಳೊಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರದ ಬಳಿ ಯಾವುದಾದರೂ ಯೋಜನೆ ಇದೆಯೇ?

ಆ) ಹಾಗಿದ್ದಲ್ಲಿ. ಜಿಲ್ಲಾಪರಿಷತ್ತಿನ ರಸ್ತೆಗಳ ಸಂಖ್ಯೆ ಎಷ್ಟು?

ಇ) ಇದರಲ್ಲಿ ಬಳ್ಳೊಳ್ಳಿ ವಿಧಾನಸಭಾ ಮತ ಕ್ಷೇತ್ರದಲ್ಲಿ ಎಷ್ಟು ರಸ್ತೆಗಳು ಇವೆ?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ 10000 ಕಿ.ಮಿ. ರಸ್ತೆಗಳನ್ನು ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮಿ. ನ ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ